ಮೂಲ ದಾವಾ ಃ 120-2016 ಪಿಡಬ್ಲು-1

ಸಾಕ್ಷಿಯನ್ನು ದಿನಾಂಕಃ 05-07-2018 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು ಃ ಶ್ರೀ ಎಸ್ ಟಿ ಟಿ ವಕೀಲರಿಂದ

ಸಾಕ್ಷ್ಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ಪ್ರತಿವಾದಿಗಳು ನಮಗೆ ಸಂಬಂಧಿಕರಲ್ಲ. ದಾವಾ ಆಸ್ತಿ ಶೇತ್ಕಿ ಜಮೀನು ಅಲ್ಲ. ನನ್ನ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿ ಶೇತ್ಕಿ ಜಮೀನು ಅಂತ ಬರೆಸಿದ್ದೇನೆ ಅಂದರೆ ಸರಿ. ದಾವಾ ಆಸ್ತಿ 82/1 ಒಟ್ಟು 8 ಗುಂಟೆ ಕ್ಷೇತ್ರ ಹೊಂದಿದೆ. ದಾವಾ ಆಸ್ತಿ ಕ್ಷೇತ್ರ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿ. ದಾವಾ ಆಸ್ತಿ ಬಿನ್ ಶೇತ್ಕಿ ಆಗಿಲ್ಲ ಅಂದರೆ ನನಗೆ ಗೊತ್ತಿಲ್ಲ. ಪಂಚಾಯತಿಗೆ ಆಸ್ತಿ ಸೇರಬೇಕಾದರೆ ಕಂದಾಯದಿಂದ ಬಿನ್ ಶೇತ್ಕಿ ಆಗಬೇಕೆಂದರೆ ಗೊತ್ತಿಲ್ಲ. ಹಿಸ್ಸಾ ನಂ 82/1 ಒಟ್ಟು 8 ಗುಂಟೆ ಕ್ಷೇತ್ರ ಇದ್ದು 2 ಗುಂಟೆ ಅಂತ ನನ್ನ ದಾವಾ ಪತ್ರದಲ್ಲಿ ತೋರಿಸಿದ್ದೇವೆ ಅಂದರೆ ಸಾಕ್ಷಿಯು ನಾವು ಖರೀದಿ ಹಿಡಿದಿದ್ದು 2 ಗುಂಟೆ ಅಂ ತನುಡಿಯುತ್ತಾರೆ.

ದಾವಾ ಆಸ್ತಿ ರಿ ಸ ನಂ 82/1 ಒಟ್ಟು 8 ಗುಂಟೆ ಜಮೀನನ್ನು ಸಿದ್ದಪ್ಪ ಮತ್ತು ಅವರ ಸಹೋದರ ಏಗಪ್ಪ ರವರು ಖರೀದಿ ಹಿಡಿದಿದ್ದರು ಅಂದರೆ ಸರಿ. ಖರೀದಿ ಪ್ರಕಾರ 8 ಗುಂಟೆ ಪೈಕಿ 2 ಗುಂಟೆ ಸಿದ್ದಪ್ಪನಿಗೆ ಬಂದಿದೆ ಅಂದರೆ ಸರಿ. ಸಿದ್ದಪ್ಪ ಪೌತಿಯೊದ ನಂತರ ಸದರಿ 2 ಗುಂಟೆ ಪ್ರತಿವಾದಿಯರಿಗೆ ವಾರ್ಸಾ ಮೂಲಕ ಬಂದಿದೆ ಅಂದರೆ ಸರಿ. ಇವತ್ತಿನವರೆಗೂ ಪ್ರತಿವಾದಿಯರೆ 2 ಗುಂಟೆ ಆಸ್ತಿಗೆ ಕಬ್ಜಾ ಹೊಂದಿದ್ದಾರೆ ಅಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಸ್ಟ್ಯಾಂಪ್ ಪೇಪರ್ ಮೂಲಕ ನಮಗೆ ಬರೆದುಕೊಟ್ಟಿದ್ದಾರೆ. ಆ ಮೂಲಕ ನಾನು ಪಂಚಾಯತಿ ದಾಖೆಗಳಲ್ಲಿ ನಮೂದು ಮಾಡಿಕೊಂಡಿರುತ್ತೇನೆ. ಖರೀದಿ ನೋಂದಾಗಿದೆಯೊ ಅಂದರೆ ಸಾಕ್ಷಿಯು ಆ ಬಗ್ಗೆ ನನಗೆ ತಿಳಿದಿಲ್ಲ, ಮಾರಾಟಗಾರರೇ ಪತ್ರ ಮಾಡಿಕೊಂಡು ಬಂದಿದ್ದಾರೆ ಅಂತ ನುಡಿಯುತ್ತಾರೆ. ಖರೀದಿ ಪತ್ರ ಹಾಜರುಪಡಿಸಿಲ್ಲ ಅಂದರೆ ಗೊತ್ತಿಲ್ಲ. ನಮಗೆ ಖರೀದಿ ಮಾಡಿಕೊಟ್ಟಿದ್ದು ಆ ಮೂಲಕ ನಾವು ಪಂಚಾಯತಿಯಲ್ಲಿ ದಾಖಲೆ ಮಾಡಿಸಿಕೊಂಡಿದ್ದೇವೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಖರೀದಿ ಪತ್ರದಲ್ಲಿ ಕಬ್ಜಾ ಬಿಟ್ಟುಕೊಟ್ಟಿದ್ದೇನೆ ಅಂತ ಬರೆಯಲಾಗಿಲ್ಲ ಅಂದರೆ ಕಬ್ಜಾ ಬಿಟ್ಟುಕೊಟ್ಟಿದ್ದಾರೆ ಇವತ್ತಿಗೂ ನಾವೆ ಕಬ್ಜಾದಲ್ಲಿದ್ದೇವೆ ಅಂತ ನುಡಿಯುತ್ತಾರೆ. ಪಂಚಾಯತಿ ದಾಖಲೆಗಳು ಖೊಟ್ಟಿ ಇದ್ದು ಯೊವುದೇ ಠರಾವು ಮೂಲಕ ನಮೂದಾಗಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯರ ಮುಗ್ದತನವನ್ನು ದುರುಪಯೋಗಪಡಿಸಿಕೊಂಡು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಅಂದರೆ ಸರಿಯಲ್ಲ. ಖರೀದಿ ವ್ಯವಹಾರವು 1984 ರಲ್ಲಿ ಆಗಿದೆ. ಯೊವುದೇ ಖರೀದಿ ಆಗದಿದ್ದರೂ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಖರೀದಿ ಉತಾರ, ಪಂಚಾಯತಿ ಉತಾರ ಹಾಗೂ ಕರ ಪಾವತಿ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ಪಂಚಾಯತಿ ದಾಖಲೆಗಳು ಖೊಟ್ಟಿ ಇವೆ ಅಂದರೆ ಸರಿಯಲ್ಲ. ಫೋಟೋಗಳು ದಾವಾ ಆಸ್ತಿಗೆ ಸಂಬಂಧಿಸಿದವಲ್ಲ ಅಂದರೆ ಸರಿಯಲ್ಲ. ನಿರ್ದಿಷ್ಟವಾದ ದಿನದಂದು ಫೋಟೋ ತೆಗೆಸಿದ್ದೇವೆ ಅಂತ ಯೊವುದೇ ದಾಖಲೆ ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ಫೋಟೋ ಮತ್ತು ಸಿಡಿ ದಾವಾ ಆಸ್ತಿಗೆ ಸಂಬಂಧಿಸಿದವಲ್ಲ ಅಂದರೆ ಸರಿಯಲ್ಲ.

ಈ ದಾವೆ ಹೂಡುವ ಪೂರ್ವದಲ್ಲಿ ಪ್ರತಿವಾದಿಯರು ನನ್ನ ವಿರುದ್ದ ಅಸಲು ದಾವಾ ನಂ 270/14 ಅಂತ ದಾಖಲಿಸಿದ್ದರು ಅಂದರೆ ನನಗೆ ಮಾಹಿತಿ ಇಲ್ಲ ಅಂತ ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ವಕೀಲರನ್ನು ನೇಮಿಸಿಕೊಂಡಿದ್ದೆ ಅಂದರೆ ನನಗೆ ಮಾಹಿತಿ ಇಲ್ಲ ಅಂತ ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಮಗೆ ಸಾಕಷ್ಟು ಕಾಲಾವಕಾಶ ಕೊಟ್ಟರೂ ನಾವು ಕೈಫಿಯತ್

ಸಲ್ಲಿಸಿ ಹಾಜರಾಗಿಲ್ಲ ಅಂದರೆ ಸರಿಯಲ್ಲ. ಅಸಲು ದಾವಾ ನಂ 270/14 ರಲ್ಲಿ ನಮ್ಮ ವಿರುದ್ಧ ಶಾಶ್ವತ ನಿರ್ಭಂಧಕಾಜ್ಞೆ ಇದ್ದರೂ ಸಹ ಆದೇಶ ಉಲ್ಲಂಘಿಸಿ ನಾವೇ ಸ್ವಾಧೀನದಲ್ಲಿದ್ದೇವೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ದಾವಾ ಆಸ್ತಿ ಸ್ವಾಧೀನದಲ್ಲಿಲ್ಲದಿದ್ದರೂ ಕಬ್ಜಾ ನಮ್ಮ ಬಳಿ ಇದೆ ಅಂತ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಅಸಲು ದಾವಾ ನಂ 270/14 ರ ಆದೇಶದ ವಿರುದ್ಧ ಅಪೀಲು ಸಲ್ಲಿಸಿದ್ದೇವೆ ಅಂದರೆ ಸರಿ. ದಾವಾ ಆಸ್ತಿ ನಮ್ಮ ಸ್ವಾಧೀನದಲ್ಲಿದೆ ಅಂತ ತೋರಿಸಲು ನಿರ್ದಿಷ್ಟವಾದ ಅಳತೆ ಮತ್ತು ಚೆಕ್ ಬಂದಿ ತೋರಿಸಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿ ಖರೀದಿಗೆ ಕೊಟ್ಟಿದ್ದಾರೆ ಅಂತ ಸುಳ್ಳು ಹೇಳಿ ದಾವೆ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ಹುಲ್ಲಿನ ಬಣವೆ ಮತ್ತು ತಿಪ್ಪೆ ಇದೆ ಅಂತ ಸುಳ್ಳು ಮಾಹಿತಿ ನೀಡಿದ್ದೇನೆ ಅಂದರೆ ಸರಿಯಲ್ಲ. ದಿಃ 25.08.07 ರಂದು ದಾವಾ ಆಸ್ತಿ ನಾವು ಖರೀದಿ ಹಿಡಿದಿದ್ದೇವೆ ಅಂತ ವಾದ ಪತ್ರದಲ್ಲಿ ಬರೆಯಲಾಗಿದೆ ಅಂದರೆ ಸರಿ. ನಾನು ಈಗಾಗಲೇ 1984 ರಲ್ಲಿ ದಾವಾ ಆಸ್ತಿ ಖರೀದಿ ಹಿಡಿದಿದ್ದೇನೆ ಅಂತ ನುಡಿದಿದ್ದೇನೆ ಅಂದರೆ ಸಾಕ್ಷಿಯು 10-12 ವರ್ಷಗಳ ಹಿಂದೆ ನಾನು ಆಸ್ತಿ ಖರೀದಿ ಹಿಡಿದಿದ್ದೇನೆ, ಶಾಲೆ ಕಲಿಯದಿದ್ದ ಕಾರಣ ಸರಿಯೊಗಿ ಮಾಹಿತಿ ಇಲ್ಲ ಅಂತ ನುಡಿಯುತ್ತಾರೆ. ನನ್ನ ದಟಾಯಿತನದಿಂದ ಪ್ರತಿವಾದಿಯರ ಕಬ್ಜಾ ಅಡ್ಡಿಪಡಿಸಲು ಸುಳ್ಳು ದಾವೆ ನೀಡಿದ್ದೇನೆ ಅಂದರೆ ಸರಿಯಲ್ಲ. ದಾವಾ ಕಾರಣದ ಬಗ್ಗೆ ನಿರ್ದಿಷ್ಟವಾಗಿ ಮಾಹಿತಿ ಇಲ್ಲ. ದಾವೆ ಸಲ್ಲಿಸಲು ದಾವಾ ಕಾರಣ ಯಾವ ದಿನ ಉಂಟಾಗಿದೆ ಅಂತ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಂಗತಿಗಳ ಆಧಾರದ ಮೇಲೆ ದಾವೆ ಕೊಟ್ಟಿದ್ದೇನೆ ಅಂದರೆ ಸರಿಯಲ್ಲ.

ಆಸ್ತಿ ನಂ 82/1ಬ/1 ಕ್ಷೇತ್ರ 2 ಗುಂಟೆ ಪ್ರತಿವಾದಿಯರ ಮಾಲ್ಕಿ ಕಬ್ಜಾದಲ್ಲಿದೆ ಅಂದರೆ ಸರಿ. ಆದರೆ ನಾವು ಸಹ ಕಬ್ಜಾದಲ್ಲಿದ್ದೇವೆ ಅಂತ ನುಡಿಯುತ್ತಾರೆ. ಆಸ್ತಿ ನಂ 82/1 ಕ್ಷೇತ್ರ 8 ಗುಂಟೆಯನ್ನು 1ನೇ ಪ್ರತಿವಾದಿ ಗಂಡ ಸಿದ್ದಪ್ಪ ಮತ್ತು ಅವರ ಸಹೋದ ಏಗಪ್ಪ ರವರು ಮೂಲ ಮಾಲೀಕರಾದ ಸಂಕಪ್ಪ ಚಿನ್ನಪ್ಪ ಶೀಗೀಹಳ್ಳಿ ರವರಿಂದ ಖರೀದಿ ಹಿಡಿದಿದ್ದರು ಅಂದರೆ ಸರಿ. ಸಿದ್ದಪ್ಪ ರವರಿಗೆ ವಾಟ್ನಿ ಮೂಲಕ 2 ಗುಂಟೆ ಆಸ್ತಿ ಬಂದಿದೆ ಅಂದರೆ ಸರಿ. 2013 ರಲ್ಲಿ ಸಿದ್ದಪ್ಪ ಪೌತಿಯಾದ ನಂತರ ಪ್ರತಿವಾದಿಯರು ತಮ್ಮ ಹೆಸರಿಗೆ ವಾರ್ಸಾ ಪ್ರಕಾರ ಹಚ್ಚಿಸಿಕೊಂಡಿದ್ದಾರೆ ಅಂದರೆ ಗೊತ್ತಿಲ್ಲ. ವಾರ್ಸಾ ಹಚ್ಚಿಕೊಂಡ ನಂತರ ನಾವು ತಕರಾರು ಸಲ್ಲಿಸಿಲ್ಲ ಅಂದರೆ ಸಾಕ್ಷಿಯು ಅದರ ಬಗ್ಗೆ ಮಾಹಿತಿ ಇರಲಿಲ್ಲ ಅಂತ ನುಡಿಯುತ್ತಾರೆ. ಪ್ರತಿವಾದಿಯವರು ಹೆಸರು ಹಚ್ಚಿಕೊಂಡಮಾಹಿತಿ ಈಗ್ಗೆ 3-4 ವರ್ಷದ ಹಿಂದೆ ತಿಳಿಯಿತು.

1ನೇ ಪ್ರತಿವಾದಿ ಗಂಡ ಸಿದ್ದಪ್ಪ ರವರ ಜೀವಿತ ಕಾಲದಲ್ಲಿ 2 ಗುಂಟೆ ಆಸ್ತಿ ಅವರ ಹೆಸರಿನಲ್ಲಿದ್ದದನ್ನು ನಾನು ಪ್ರಶ್ನಿಸಿಲ್ಲ ಅಂದರೆ ಸರಿ. ಸಿದ್ದಪ್ಪ ತೀರಿಕೊಂಡ ನಂತರ ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ದಬ್ಬಾಳಿಕೆ ಮಾಡಿ ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಪಂಚಾಯತಿ ದಾಖಲೆಗಳಾಗಿರುವ ಠರಾವನ್ನು ನ್ಯಾಯೊಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಕಬ್ಜಾ ಹೊಂದಿರದಿದ್ದರೂ ಖೊಟ್ಟಿ ದಾಖಲೆಗಳನ್ನು ಮಾಡಿಕೊಂಡು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಯರೇ ಇವತ್ತಿನವರೆಗೂ ಕಬ್ಜಾದಲ್ಲಿದ್ದಾರೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ